ಸಾಕ್ಷಿಯನ್ನು ದಿಃ 11.04.2019 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಎ ವಿ ಜೆ ವಕೀಲರಿಂದಃ

ದಾವೆಯಲ್ಲಿ ಸಲ್ಲಿಸಿರುವ ಪ್ರತಿವಾದ ಪತ್ರವನ್ನು ಓದಿ ತಿಳಿದುಕೊಂಡಿರುತ್ತೇನೆ. ನಮ್ಮ ತಂದೆ ಸಃನಂಃ 197/2 ಎ ರಲ್ಲಿ ಒಂದು ಎಕರೆ ಜಮೀನನ್ನು 1999 ರಲ್ಲಿ ಖರೀದಿ ಮಾಡಿರುತ್ತಾರೆ. ನಿರ್ಧಿಷ್ಟ ತಾರೀಖು ಗೊತ್ತಿಲ್ಲ. ಎಷ್ಟು ಮೊತ್ತಕ್ಕೆ ಖರೀದಿ ಮಾಡಿದ್ದಾರೆ ಎಂಬುದು ಗೊತ್ತಿಲ್ಲ. ಸದರಿ ಜಮೀನನ್ನು ಪಾಪಣ್ಣನ ಹೆಂಡತಿ ನಿಂಗಮ್ಮ ಎಂಬುವವರಿಂದ ಖರೀದಿ ಮಾಡಿರುತ್ತಾರೆ. ಸದರಿ ಜಮೀನು ಮೈಸೂರು ಹೋಬಳಿ ವ್ಯಾಪ್ತಿಗೆ ಒಳಪಡುತ್ತದೆ. ಕ್ರಯಪತ್ರವನ್ನು ನಿಂಗಮ್ಮ ಮತ್ತು ಅವರ ಮಗಳು ಬರೆದುಕೊಟ್ಟಿರುತ್ತಾರೆ ಆಕೆಯ ಹೆಸರು ನನಗೆ ಗೊತ್ತಿಲ್ಲ. ಸಃನಂಃ 197/2 ಎ ರ ಉತ್ತರಕ್ಕೆ ಸಃನಂಃ 197/1 ಬಿ ಇದ್ದು ಉಳಿದ ಚಕ್ಕುಬಂದಿ ನನಗೆ ಗೊತ್ತಿಲ್ಲ. ಕ್ರಯಪತ್ರಕ್ಕೆ ಯಾರು ಯಾರು ಸಾಕ್ಷಿದಾರರು ಎಂಬುದು ನನಗೆ ಗೊತ್ತಿಲ್ಲ. ಕ್ರಯಪತ್ರದ ಬಿಕ್ಲಂ ದಾರರು ಯಾರೆಂದು ಗೊತ್ತಿಲ್ಲ. ಸಃನಂಃ 197/1 ಬಿ ನ್ನು 1990 ನೇ ಸಾಲಿನಲ್ಲಿ ಖರೀದಿ ಮಾಡಿರುತ್ತಾರೆ. ಅದರ ತಾರೀಖು ಗೊತ್ತಿಲ್ಲ. ಅದರ ಚಕ್ಕುಬಂದಿ ಹೇಳಲು ಗೊತ್ತಾಗುವುದಿಲ್ಲ. ಆ ಕ್ರಯಪತ್ರವನ್ನು ಯಾರು ಬರೆದುಕೊಟ್ಟರು ಎಂಬುದು ಗೊತ್ತಿಲ್ಲ. ಸದರಿ ಪತ್ರದಲ್ಲಿ ಕ್ರಯದ ಹಣ ರೂ5,000/- ಎಂದು ಕಾಣಿಸಿದ್ದು ವ್ಯವಹಾರ ರೂ.30,000/- ಆಗಿದ್ದು ಬಾಕಿ ಹಣ ಕೊಡಬೇಕಾಗಿದೆ. ಆ ಪತ್ರದ ಸಾಕ್ಷಿದಾರರು ಹಾಗೂ ಬಿಕ್ಲಂದಾರರು ಯಾರೆಂದು ಗೊತ್ತಿಲ್ಲ. ಸಃನಂಃ 197/2 ಎ ಮತ್ತು 197/1 ಬಿ ಮೂಲತಃ ನಿಂಗಮ್ಮಳಿಗೆ ಸೇರಿದ್ದು ಆಕೆಗೆ ಆಕೆಯ ಮಾವನಿಂದ ಬಂದಿರುತ್ತದೆ. ಆತನ ಹೆಸರು ನಿಖರವಾಗಿ ಗೊತ್ತಿಲ್ಲ. ಜಮೀನು ಖರೀದಿ ಮಾಡುವಾಗ ಏನೇನು ದಾಖಲೆಗಳನ್ನು ಪರಿಶೀಲಿಸಿದ್ದಾರೆ ಎಂಬುದು ಗೊತ್ತಿಲ್ಲ.

ನಾನು ಮೂಲ ದಾಖಲೆಗಳನ್ನು ಪರಿಶೀಲಿಸಿರುವುದಿಲ್ಲ. ಸಃನಂಃ 197/1 ಬಿ ಮತ್ತು 197/2 ಎ ಎಂದು ಯಾವ ಇಸವಿಯಲ್ಲಿ ಪೋಡಾಗಿರುತ್ತದೆ ಎಂಬುದು ನನಗೆ ಗೊತ್ತಿಲ್ಲ. ಆ ರೀತಿ ಪೋಡಾದ ಬಗ್ಗೆ ನನ್ನ ಬಳಿ ದಾಖಲೆಗಳು ಇಲ್ಲ. ಪೋಡಾಗುವ ಕಾಲಕ್ಕೆ ನಿರ್ವಹಿಸಿರುವ ಸರ್ವೇ ಸ್ಕೆಚ್ ಮತ್ತು ಆಕಾರ್ ಬಂದ್ ನ್ನು ನಾನು ನೋಡಿಲ್ಲ. ಅವುಗಳ ಪ್ರತಿಗಳು ನನ್ನ ಬಳಿ ಇಲ್ಲ. ನನ್ನ ಬಳಿ ಏನು ದಾಖಲೆಗಳು ಇದ್ದವೋ ಅವುಗಳನ್ನು ಈಗಾಗಲೇ ಹಾಜರುಪಡಿಸಿದ್ದೇನೆ. ಸಃನಂಃ 197/2 ರಲ್ಲಿ ಎಷ್ಟು ಪೋಡುಗಳಾಗಿವೆ ಎಂದು ನನಗೆ ಗೊತ್ತಿಲ್ಲ. ಸಃನಂಃ 197/2 ಎ ಮತ್ತು 197/1 ಬಿ ಇವುಗಳ ಹಳೆಯ ಋಣಭಾರ ರಾಹಿತ್ಯ ಪ್ರಮಾಣ ಪತ್ರಗಳನ್ನು ತೆಗೆಸಿ ನೋಡಿರುವುದಿಲ್ಲ. ಸಃನಂಃ 197/2 ಎ ಇದರ 1970 ನೇ ಇಸವಿಯಿಂದ ಆರ್ ಟಿ ಸಿ ಮತ್ತು ಋಣಭಾರ ರಾಹಿತ್ಯ ಪ್ರಮಾಣಪತ್ರಗಳನ್ನು ಪರಿಶೀಲಿಸಿರುವುದಿಲ್ಲ. ಪೂರ್ವಕ್ಕೆ ನಂಜಪ್ಪನ ಜಮೀನು ಇರುವುದು ಗೊತ್ತಿಲ್ಲ, ಪಶ್ಚಿಮಕ್ಕೆ ಮಾನಂದವಾಡಿ ರಸ್ತೆ, ದಕ್ಷಿಣಕ್ಕೆ ಸಃನಂಃ 197/2 ಬಿ ಮತ್ತು ಉತ್ತರಕ್ಕೆ ಸಃನಂಃ 197/1 ಬಿ ಚಕ್ಕುಬಂದಿಯ ಒಳಗಿರುವ ಜಮೀನು ನನಗೆ ಸಂಬಂಧಪಡುವುದಿಲ್ಲ. ಸಃನಂಃ 197/2 ಎ ರ ಬಗ್ಗೆ ಋಣಭಾರ ರಾಹಿತ್ಯ ಪ್ರಮಾಣ ಪತ್ರ ತೆಗೆಗಿಸಿ ಏನು ವ್ಯವಹಾರ ಆಗಿದೆ ಎಂಬ ಬಗ್ಗೆ ನಾನು ಪರಿಶೀಲಿಸಿಲ್ಲ. ಸಃನಂಃ 197/2 ಎ ಇದರ ಹಳೆಯ ಆರ್ ಟಿ ಸಿ ಗಳನ್ನು ತೆಗೆಸಿ ನೋಡಿರುವುದಿಲ್ಲ. ಸದರಿ ಜಮೀನುಗಳ ಆರ್ ಒ ಆರ್ ಮತ್ತು ಐ ಒ ಎಲ್ ದಾಖಲೆಗಳನ್ನು ತೆಗೆಸಿ ನೋಡಿರಿವುದಿಲ್ಲ. ನಮ್ಮ ತಂದೆ ಏನು ದಾಖಲೆಗಳನ್ನು ಪಡೆದಿದ್ದರೋ ಅದನ್ನು ಹಾಜರುಪಡಿಸಿರುತ್ತೇನೆ.

ಸಃನಂಃ 197/2 ಇದು ಮೂಲತಃ ಜೋಗೌಡ ಎಂಬುವವರಿಗೆ ಸೇರಿದ್ದು ಅಂದರೆ ಸರಿ. ನಂತರ ಸದರಿ ಜಮೀನು ಪೋಡಾಗಿರುತ್ತದೆ ಎಂದರೆ ಸರಿ. ಜೋಗೌಡನಿಗೆ ಎಷ್ಟು ಜನ ಮಕ್ಕಳು ಎಂಬುದು ನನಗೆ ಗೊತ್ತಿಲ್ಲ. ಆತನ ವಂಶವೃಕ್ಷದ ಬಗ್ಗೆ ನಾನು ವಿಚಾರಣೆ

ಮಾಡಿರುವುದಿಲ್ಲ. ಜೋಗೌಡನಿಗೆ ಸಣ್ಣೇಗೌಡ ಎಂಬ ಒಬ್ಬ ಮಗ ಇದ್ದಾನೆ ಅಂದರೆ ಸರಿ. ಆತನ ಇನ್ನೊಬ್ಬ ಮಗನ ಹೆಸರು ಪುಟ್ಟಯ್ಯ.

ಹೆಚ್ಚಿನ ಪಾಟೀ ಸವಾಲನ್ನು ಕೋರಿಕೆ ಮೇರೆಗೆ ಮುಂದೂಡಲಾಯಿತು.

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-
ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮೈಸೂರು.